**ಸೀತಾರಾಮಯ್ಯ ಅವರ ಕೊಟ್ಟಡಿಯಲ್ಲಿ ಕುರ್ಚಿಗಳು ಇರಲಿಲ್ಲ. ಒಂದು ಚಾಪೆಯ ಮೇಲೆ ವಿ.ಸೀ. ಕವಚುಗಾಲು ಹಾಕಿ ಕುಳಿತುಕೊಳ್ಳುತ್ತಿದ್ದರು. ಸುತ್ತಲೂ ನಾಲ್ಕು ಗೋಡೆಗಳ ಬದಿಯಲ್ಲಿ ಪುಸ್ತಕಗಳ ರಾಶಿ...**

ಅವರು ತಿದ್ದಿದ ಪ್ರೂಫ್ ಹಾಳೆಯ ಮೇಲೆಯೇ ಕಣ್ಣು. ಆರೆ, ಅವರ ಮನೆ ಸಮೀಪಿಸುತ್ತ ಇದ್ದಂತೆ, ಅವರು ತಿದ್ದಿದ ಆ ಶಬ್ದಗಳು, ಈಗ ತಿಳಿದುಹೋಯಿತು. ಕೊನೆಗೂ ನಾನು ಗೆದ್ದೆ ಎಂದುಕೊಂಡೆ.

ಆವರ ಮನೆಯೊಳಗೆ ಪ್ರವೇಶಿಸಿ 'ಸಾರ್, ಇದು ಹೀಗಲ್ಲವೆ? ನಿಮ್ಮನ್ನು ಕೇಳಿ ಹೋಗೋಣ ಅಂತ ಬಂದೆ. ಆದರೆ ಎಷ್ಟು ತಲೆ ಚಚ್ಚಿಕೊಂಡರೂ ಅರ್ಥವಾಗದು. ನಿಮ್ಮ ಮನೆ ಸಮೀಪಿಸುತ್ತಿದ್ದಂತೆ ಫಕ್ಕನೆ ಹೊಳೆದುಬಿಟ್ಟಿತಲ್ಲ. ಏನಾಶ್ಚರ್ಯ?' ಎಂದೆ.

'ಶೇಷನಾರಾಯಣರಿಗೆ ಅರ್ಥವಾಗದ್ದು ಅದೆಂಥಾದಪ್ಪಾ?' ಎಂದರು ವಿ.ಸೀ.

'ಇನ್ನು ಮೇಲೆ ಹೀಗೆಲ್ಲ ಸೇರಿಸಬೇಡಿ ಸಾರ್. ನಮಗೆ ಫಜೀತಿ ಆಗುತ್ತೆ' ಎಂದೆ.

'ನೀವೂ ಹಾಗೆ ಹೇಳ್ತೀರ? ಅದು ಕಂಪಾಸಿಟರ್ ಹೇಳೋ ಮಾತು. ತಿದ್ದಿದಷ್ಟೂ ಕೃತಿಯ ಮೌಲ್ಯ ಹೆಚ್ಚುತ್ತದೆಯಲ್ಲವೇ?' ಎಂದರು. ಮತ್ತೇನು ಈ ಹಿರಿಯದೊಂದಿಗೆ ಮಾತಾಡಲು ಸಾಧ್ಯ?

'ಸರಿ ಸಾರ್' ಎಂದೆ.

ಅವರ ಕೊಟ್ಟಡಿಯಲ್ಲಿ ಕುರ್ಚಿಗಳು ಇಲ್ಲ. ಒಂದು ಚಾಪೆಯ ಮೇಲೆ ವಿ.ಸೀ. ಕವಚುಗಾಲು ಹಾಕಿ ಕುಳಿತುಕೊಳ್ಳುವರು. ಅವರನ್ನು ನೋಡಲು ಹೋದವರೂ ಅವರ ಎದುರಿಗೆ ಪದ್ಮಾಸನ ಹಾಕಿಯೋ ಇಲ್ಲವೇ ಅವರ ಹಾಗೆಯೇ ಕುಳಿತುಕೊಳ್ಳಬೇಕು. ಸುತ್ತಲೂ ನಾಲ್ಕು ಗೋಡೆಗಳ ಬದಿಯಲ್ಲಿ ಪುಸ್ತಕಗಳ ರಾಶಿ.

ಈ ವಿದ್ವಾಂಸರ ಬರವಣಿಗೆ, ಓದು, ಮಾತು ಸರ್ವಸ್ವವೂ ಈ ಕೊಟ್ಟಡಿಯಲ್ಲಿಯೇ.

ಕವರ್ ಟಿಂಟ್ ಮಾಡುವಾಗ ಅವರನ್ನು ಕೇಳಿದೆ ನಾನು ಅಚ್ಚ ಕೆಂಪು ಬಣ್ಣ ಹಾಕಿ ಮುದ್ರಿಸಿಬಿಟ್ಟೆ.

ಅವರಿಗೆ ಕೆಂಪು ಸುತರಾಂ ಹಿಡಿಸದ ಬಣ್ಣ, ನಾನು ಸ್ವಲ್ಪ ಕಮ್ಯೂನಿಸ್ಟ್ ಮನೋಭಾವದವನು. ಆದ್ದರಿಂದ ಈ ಬಣ್ಣ ನನಗೆ ಅಚ್ಚುಮೆಚ್ಚು. ಅವರ ಗೊಣಗಾಟ ಹೇಳತೀರದು.

'ಕೆಂಪು ಬಣ್ಣ ಹಾಕಿ ಬಿಟ್ಟರಿ... ಕೆಂಪು ಬಣ್ಣ ಹಾಕಿಬಿಟ್ಟರಿ...'

ಈ ಹಿರಿಯರು ಸಳ ಸಳ ಪೇಚಾಡಿ ಕೊಳ್ಳುವುದು ಬೇಡ ಎಂದು ಮತ್ತೆ ನೀಲಿ ಬಣ್ಣ ಹಾಕಿ ಪ್ರಿಂಟು ಮಾಡಿದೆ. ಅವರಿಗೆ ಮೇಲೂ ಗಾಬರಿ.

'ಏನು? ಒಂದು ಸಾವಿರ ಪ್ರತಿ ವೇಸ್ಟ್ ಮಾಡಿದಿರಾ?' ಹೀಗೆ.

'ಇಲ್ಲ ಸಾರ್. ಇದು ಬರೀ ಟಿಂಟ್‌ತಾನೇ? ಅದನ್ನು ಬೇರೆಯವರ ಪುಸ್ತಕಕ್ಕೆ ಉಪಯೋಗಿಸಿಕೊಳ್ಳುತ್ತೇನೆ' ಎಂದ ಮೇಲಷ್ಟೆ ಅವರಿಗೆ ಸಮಾಧಾನ.

ಬರವಣಿಗೆಯಲ್ಲಿ ಹೇಗೋ ಮಾತಿನಲ್ಲೂ ಹಾಗೆಯೇ ಮೃದು. ಬೇರೆಯವರ ಮನಸ್ಸನ್ನು ಸ್ವಲ್ಪವೂ ನೋಯಿಸಬಾರದು, ಎನ್ನುವಂಥ ನಡವಳಿಕೆ ವಿ.ಸೀ.ಯವರದು. ಅವರೊಂದಿಗೆ ಅರ್ಧಗಂಟೆ ಇದ್ದರೆ ಸಾಕು. ಅಬ್ಬಬ್ಬಾ ಎಷ್ಟು ವಿಷಯಗಳನ್ನು ತಿಳಿದುಕೊಳ್ಳಬಹುದಿತ್ತು!

ವಿ.ಸೀ. ಯವರ ಬಳಿ ಒಡನಾಡುವುದೇ ಒಂದು ಸುಖ, ಸೌಭಾಗ್ಯ. ತಂಗಾಳಿಯ ಹಾಗೆ.

(ಆಗಸ್ಟ್, 1998)